(ಇಂದು ದಿನಾಂಕಃ 12–02–2026 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ವಿ ಟಿ ಕೆ ವಕೀಲರಿಂದ ಃ-

1) ಬಸನಗೌಡ ರವರಿಗೆ ಗದಿಗೆಪ್ಪಗೌಡ ಹಾಗೂ ಯಲ್ಲಮ್ಮ ಎನ್ನುವ ಇಬ್ಬರು ಮಕ್ಕಳು ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಗದಿಗೆಪ್ಪಗೌಡ ಮಾತ್ರ ಎಂದು ನುಡಿಯುತ್ತಾರೆ. ಗದಿಗೆಪ್ಪಗೌಡನ ಹೆಂಡತಿ ಗುರುಸಿದ್ದವ್ವ ಎಂದರೆ ಸರಿ. ಗದಿಗೆಪ್ಪಗೌಡ ಹಾಗೂ ಗುರುಸಿದ್ಧವ್ವ ರವರಿಗೆ ಯಾವುದೇ ಸಂತಾನ ಜನಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ದತ್ತಕ್ಕೆ ಮಗು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಯಲ್ಲಮ್ಮ ರವರಿಗೆ ಗುರಪ್ಪ ಎನ್ನುವ ಗಂಡ ಎಂದರೆ ಸಾಕ್ಷಿಯು ಪರಸನಗೌಡ ರವರಿಗೆ ಗದಿಗೆಪ್ಪಗೌಡ ಒಬ್ಬನೇ ಮಗ ಗುರಪ್ಪ ಹಾಗೂ ಯಲ್ಲಮ್ಮ ಹೇಗೆ ಬರುತ್ತಾರೆ ಎಂದು ಮರುಪ್ರಶ್ನೆ ಮಾಡುತ್ತಾರೆ.

2) ಯಲ್ಲಮ್ಮನಿಗೆ ಗುರಪ್ಪ ಎಂಬ ಮಗ ಇರುತ್ತಾನೆ ಅಂದರೆ ಸರಿಯಲ್ಲ. ಗುರಪ್ಪನಿಗೆ ಬಸವ್ವ ಎನ್ನುವ ಹೆಂಡತಿ ಇರುತ್ತಾರೆ ಅಂದರೆ ಸರಿಯಲ್ಲ. ವಾದಿಯರು ಬಸವ್ವನ ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಮೊದಲನೇ ಪುಟದ 2 ನೇ ಕಂಡಿಕೆ ತೋರಿಸಿ ಅದರಲ್ಲಿ ನಾನು ವಾದಿಯರ ಪರಿಚಯವಿದೆ ಎಂದು ಉಲ್ಲೇಖ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನನ್ನ ಹೇಳಿಕೆ ಮೇರೆಗೆ ಬರೆದಿರುತ್ತಾರೆ ಎಂದರೆ ಸರಿ. ನನಗೆ ವಾದಿಯರ ಪರಿಚಯವಿದ್ದರು ಸಹ ಇಲ್ಲಾ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

3) ಗದಿಗೆಪ್ಪಗೌಡ ರವರಿಗೆ ಯಲ್ಲಮ್ಮ ಎನ್ನುವ ಸಹೋದರಿ ಇದ್ದರು ಅಂದರೆ ಸರಿಯಲ್ಲ. ಯಲ್ಲಮ್ಮ ರವರನ್ನು ಗುರಪ್ಪ ಎನ್ನುವವರ ಸಂಗಡ ವಿವಾಹ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಗದಿಗೆಪ್ಪಗೌಡ ರವರಿಗೆ ಯಾವುದೇ ಸಂತಾನ ಇಲ್ಲದ ಕಾರಣ ಬಸವ್ವ ರವರನ್ನು ತಮ್ಮ ಬಳಿ ಇಟ್ಟುಕೊಂಡು ಜೋಪಾಣ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರಾದ ಶರಣಪ್ಪ ರವರನ್ನು ಅವರು ದತ್ತಕ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**